ಲಕ್ಕ ಸಂದ್ರದ ಲಾಲಾಜಿನಗರದ ಪಕ್ಕದಲ್ಲಿರುವ ಶ್ರೀ ರಾಮಯ್ಯ ರಸ್ತೆಯಲ್ಲಿ ಅನಧಿಕೃತ ಮನೆಗಳು

894- ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಕ್ಕಸಂದ್ರದ ಲಾಲಾಜಿನಗರದ ಪಕ್ಕದಲ್ಲಿರುವ ಶ್ರೀ ರಾಮಯ್ಯ ರಸ್ತೆಯಲ್ಲಿ ಹಲವಾರು ಅನಧಿಕೃತ ಮನೆಗಳನ್ನು ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ರಸ್ತೆಯ ಮೇಲ್ಭಾಗದಲ್ಲಿ ಬಂದಿರುವ ಅನಧಿಕೃವಾಗಿ ಕಟ್ಟಿದ ಮನೆಗಳ ಸಂಖ್ಯೆ ಎಷ್ಟು?

ಇ) ಈ ಅನಧಿಕೃತ ಕಟ್ಟಡಗಳನ್ನು ತೆಗೆದುಹಾಕಲು ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮವೇನು?

ಈ) ರಸ್ತೆಯ ಮೇಲ್ಭಾಗದಲ್ಲಿ ಕಟ್ಟಿರುವ ಅನಧಿಕೃತ ಮನೆಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇಲ್ಲ

ಆ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇದೇ

ಈ) ಅದೇ

ಅನುಮತಿಯಿಲ್ಲದೆ ಬಿಸಿ ಮಿಶ್ರಣ ಯಂತ್ರವನ್ನು ನಡೆಸುತ್ತಿರುವ ಬಗ್ಗೆ

895-ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗಿ ವ್ಯಕ್ತಿಯೊಬ್ಬರು ಬೆಂಗಳೂರು ನಗರಪಾಲಿಕೆಯ ಅನುಮತಿ ಪಡೆಯದೇ ಬಿಸಿ ಮಿಶ್ರಣ ಯಂತ್ರವನ್ನು ಜಯನಗರ ಕ್ಷೇತ್ರದ ಸುದ್ದಗುಂಟೆ ಪಾಳ್ಯಕೆರೆಯಲ್ಲಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಬಿಸಿಮಿಶ್ರಣ ಯಂತ್ರವನ್ನು ನಡೆಸುತ್ತಿರುವವರು ಯಾರು?

ಇ) ಈ ಯಂತ್ರದಿಂದ ಹೊಸಬರುವ ಹೊಗೆಯ ಪರಿಸರವನ್ನು ಕಲುಷಿತಗೊಳಿಸುವುದಲ್ಲದೆ ಆ ಸುತ್ತಮುತ್ತಲಿನ ಜನರಿಗೆ ಹೊಸತರವಾದ ರೋಗಗಳು ಹರಡುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಈ ಕಾನೂನು ಬಾಹಿರ ಯಂತ್ರಸ್ಥಾವರವನ್ನು ತೆಗೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಹೌದು

ಆ) ನಗರಸಭೆಯಲ್ಲಿ ನೋಂದಾಯಿತ ಗುತ್ತಿಗೆದಾರರಾದ ಶ್ರೀ ಚಂದ್ರಶೇಖರ್ ಎಂಬುವವರು ಈ ಬಿಸಿ ಮಿಶ್ರಣ ಯಂತ್ರವನ್ನು ನಡೆಸುತ್ತಿದ್ದರು.